**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರು:-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 6 ನೇ ಫೆಬ್ರುವರಿ 2026**

**ಅಸಲು ದಾವೆ ಸಂಖ್ಯೆ: 163/2024**

**ವಾದಿಗಳು -**
ಶ್ರೀಮತಿ ಕವಿತಾ ಬಿ ಮತ್ತು ಇತರರು

**ವಿರುದ್ಧ**

**ಪ್ರತಿವಾದಿಯರು -**

ಶ್ರೀಮತಿ ರತ್ನಮ್ಮ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ-4**

**ವಾದಿಗಳು /ಅರ್ಜಿದಾರರು**

1. ಶ್ರೀಮತಿ ಕವಿತಾ ಬಿ ತಂದೆ ಬಸವರಾಜು,
ಗಂಡ ಎಸ್.ಎನ್. ಅಶೋಕ,
ವಯಸ್ಸು ಸುಮಾರು 43 ವರ್ಷ,
ಮನೆಗೆಲಸ ಮತ್ತು ವ್ಯವಸಾಯ,
ವಾಸ: ಸೂಜಿಕಲ್ಲು ಗ್ರಾಮ,
ಶ್ರೀರಾಂಪುರ ಹೋಬಳಿ,
ಹೊಸದುರ್ಗ ತಾಲ್ಲೂಕು,

2. ಶ್ರೀಮತಿ ಮಮತಾ ಎಸ್. ಬಿ ತಂದೆ ಬಸವರಾಜು,
ಗಂಡ ರಮೇಶ್ ಬಿ,
ವಯಸ್ಸು ಸುಮಾರು 41 ವರ್ಷ,

ಮನೆಗೆಲಸ ಮತ್ತು ವ್ಯವಸಾಯ,
ವಾಸಃ ಸೂಜಿಕಲ್ಲು ಗ್ರಾಮ,
ಶ್ರೀರಾಂಪುರ ಹೋಬಳಿ,
ಹೊಸದುರ್ಗ ತಾಲ್ಲೂಕು,
ಹಾಲಿ ವಾಸಃ ಶ್ರೀದೇವಿ ನಿಲಯ,
1 ನೇ ಕ್ರಾಸ್, ಎಂ.ಸಿ.ಎಸ್. ಮಿಶನ್ ಚರ್ಚ್ ಹತ್ತಿರ,
ಸಿಂಗಪುರ ಬಡಾವಣೆ, ಬೆಂಗಳೂರು-ಉತ್ತರ,
ಬೆಂಗಳೂರು.

3. ಶ್ರೀಮತಿ ಎಸ್. ಬಿ ಸವಿತಾ ತಂದೆ ಬಸವರಾಜು,
ಗಂಡ ಸಿ.ಎಲ್ ಗಂಗಾಧರ ,
ವಯಸ್ಸು ಸುಮಾರು 38 ವರ್ಷ,
ಮನೆಗೆಲಸ ಮತ್ತು ವ್ಯವಸಾಯ,
ವಾಸಃ ಸೂಜಿಕಲ್ಲು ಗ್ರಾಮ,
ಶ್ರೀರಾಂಪುರ ಹೋಬಳಿ,
ಹೊಸದುರ್ಗ ತಾಲ್ಲೂಕು,
ಹಾಲಿ ವಾಸಃ # 94/ಬಿ ಬೋರ್ವೆಲ್ ಹತ್ತಿರ,
ಚಿಕ್ಕಆಲೂರು ಕಣಕಟ್ಟೆ ಹೋಬಳಿ,
ಅರಸೀಕೆರೆ ತಾಲ್ಲೂಕು,
ಹಾಸನ ಜಿಲ್ಲೆ.

(ಅರ್ಜಿದಾರರ ಪರ ವಕೀಲರು - ಶ್ರೀ ಹೆಚ್. ರವೀಂದ್ರನಾಥ )

**ವಿರುದ್ಧ**

**ಪ್ರತಿವಾದಿಗಳು /ಎದುರುದಾರರು**

1. ಶ್ರೀಮತಿ ರತ್ನಮ್ಮ ತಂದೆ ಬಸವರಾಜು ,
ವಯಸ್ಸು ಸುಮಾರು 60 ವರ್ಷ,

2. ಹನುಮಂತಪ್ಪ ತಂದೆ ಬಸವರಾಜು ,
ವಯಸ್ಸು ಸುಮಾರು 36 ವರ್ಷ,

3. ಪ್ರದೀಪ್ ತಂದೆ ಬಸವರಾಜು ,
ವಯಸ್ಸು ಸುಮಾರು 33 ವರ್ಷ,

ಎಲ್ಲರೂ ವ್ಯವಸಾಯಗಾರರು,
ಎಲ್ಲರ ವಾಸಃ ಎಸ್. ನೇರಳೆಕೆರೆ ಗ್ರಾಮ,
ಶ್ರೀರಾಂಪುರ ಹೋಬಳಿ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

4. ರಂಗನಾಥ ಎಸ್. ಬಿ ತಂದೆ ಬಸವರಾಜು ,
ವಯಸ್ಸು ಸುಮಾರು 34 ವರ್ಷ,
ವ್ಯವಸಾಯ,
ವಾಸಃ ಸೂಜಿಕಲ್ಲು ಗ್ರಾಮ,
ಶ್ರೀರಾಂಪುರ ಹೋಬಳಿ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

(1 ರಿಂದ 3 ನೇ ಎದುರುದಾರರ ಪರ ವಕೀಲರು - ಶ್ರೀ ಎಂ.ಎಸ್. ಸದ್ಯೋಜಾತ )
(4 ನೇ ಎದುರುದಾರನ ಸ್ಥಾನದಲ್ಲಿ ಏಕತರ್ಫಿಯ )

**ಮಧ್ಯಂತರ ಅರ್ಜಿ ಸಂಖ್ಯೆ 4 ರ ಮೇಲೆ ಆದೇಶ**

ವಾದಿಗಳು /ಅರ್ಜಿದಾರರು ಈ ಮಧ್ಯಂತರ ಅರ್ಜಿ ಸಂಖ್ಯೆ 4 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿ, ತಮ್ಮ ವಾದಪತ್ರದ 4 ರಿಂದ 6 ನೇ ಪುಟಗಳಲ್ಲಿ ತಿದ್ದುಪಡಿ ಮಾಡಲು ಅನುಮತಿಸಬೇಕೆಂದು ಕೋರಿರುತ್ತಾರೆ.

**2.** ಈ ಮಧ್ಯಂತರ ಅರ್ಜಿಯನ್ನು 3 ನೇ ವಾದಿ/3 ನೇ ಅರ್ಜಿದಾರಳು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

**3.** 1 ರಿಂದ 3 ನೇ ಎದುರುದಾರರು/1 ರಿಂದ 3 ನೇ ಪ್ರತಿವಾದಿಗಳು ತಮ್ಮ ಪರ ತಕರಾರನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

**4.** ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ವಾದಿಗಳು /ಅರ್ಜಿದಾರರು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ಉದ್ದೇಶಿತ ತಿದ್ದುಪಡೆಯು ಉಭಯಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ಅವಶ್ಯವಾಗಿರುತ್ತದೆ ಎನ್ನುವುದನ್ನು ತೋರಿಸಿದ್ದಾರೆಯೇ?

ಅಂಶ- 2- ಯಾವ ಆದೇಶ?

**6**. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕಾರಾತ್ಮಕವಾಗಿ ಮತ್ತು,

ಅಂಶ-2 - ಅಂತಿಮ ಆದೇಶದಂತೆಃ

## ಕಾರಣಗಳು

**7.** **ಅಂಶ-1 –** ವಾದಿಗಳು ತಮ್ಮ ವಾದ ಪತ್ರದಲ್ಲಿ, ದಾವಾ ಆಸ್ತಿಗಳೆಲ್ಲವೂ ತಮ್ಮ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ದಾವಾ ತಪಶೀಲಿನ 1 ರಿಂದ 5 ನೇ ಆಸ್ತಿಗಳಿಗೆ ವಾದಿಗಳ ಸಮ್ಮತಿ ಇಲ್ಲದೆ, 2 ಮತ್ತು 3 ನೇ ಪ್ರತಿವಾದಿಗಳು ಮೋಸದಿಂದ ದಿನಾಂಕಃ18-01-2016 ರಂದು ನೊಂದಾಯಿತ ಮೃತ್ಯು

ಪತ್ರವನ್ನು ಲಕ್ಷ್ಮಮ್ಮ ಇವಳಿಂದ ಪಡೆದುಕೊಂಡಿರುವುದು ತಮಗೆ ಇತ್ತೀಚೆಗೆ ಗೊತ್ತಾಗಿರುತ್ತದೆ ಎಂದು ಆರೋಪಿಸಿ ದಾವಾ ಆಸ್ತಿಗಳನ್ನು ತಮ್ಮ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎಂದು ಘೋಷಿಸಬೇಕೆಂದು ಹಾಗೂ ದಿನಾಂಕಃ 18-01-2016 ರ ನೊಂದಾಯಿತ ಮೃತ್ಯು ಪತ್ರ ಶೂನ್ಯ ಮತ್ತು ಅಕೃತವಾಗಿದ್ದು, ದಾವಾ ಆಸ್ತಿಗಳಲ್ಲಿ ತಮ್ಮ ಹಿಸ್ಸೆಯ ಹಕ್ಕಿಗೆ ಭಾಂದಾಯಿಸುವುದಿಲ್ಲವೆಂದು ಘೋಷಿಸಬೇಕೆಂದು ಹಾಗು ದಾವಾ ಆಸ್ತಿಗಳಲ್ಲಿ ತಮಗೆ ¼ ಹಿಸ್ಸೆ ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ಕೋರಿರುತ್ತಾರೆ. ಆದರೆ, 2 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳು ಮೂಲತಃ ಒಬ್ಬ ಕರಿಯವ್ವ ಗಂಡ ಕಟ್ಟಪ್ಪ ಇವಳಿಗೆ ಸೇರಿದ್ದು, ಅವಳು ಲಕ್ಷ್ಮಮ್ಮ ಇವಳ ತಾಯಿ ಇದ್ದು, ಅವಳು ಲಕ್ಷ್ಮಮ್ಮ ಇವಳ ಪರ ದಾವಾ ಆಸ್ತಿಗಳನ್ನು ನೊಂದಾಯಿತ ದಾನ ಪತ್ರದ ಮೂಲಕ ಬರೆದುಕೊಟ್ಟಿರುತ್ತಾಳೆ. ಸದರಿ ಲಕ್ಷ್ಮಮ್ಮ ದಾವಾ ಆಸ್ತಿಗಳನ್ನು ತನ್ನ ಜೀವಿತಾವಧಿಯಲ್ಲಿ ಅನುಭವಿಸಿ, ದಿನಾಂಕಃ 18 ಮತ್ತು 19 ಜನವರಿ 2016 ರಂದು ನೊಂದಾಯಿತ ದಾನಪತ್ರವನ್ನು 2 ಮತ್ತು 3 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟಿರುತ್ತಾಳೆ. ಆದ್ದರಿಂದ, 2 ಮತ್ತು 3 ನೇ ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ಮಾಲಕರು ಮತ್ತು ಸ್ವಾಧೀನದಾರರಾಗಿದ್ದು, ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲವೆಂದು ಆರೋಪಿಸಿರುತ್ತಾರೆ. ಈಗ ವಾದಿಗಳು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ವಾದಪತ್ರದ ಕಂಡಿಕೆ 4 ರಿಂದ 6 ನೇ ಪುಟಗಳಲ್ಲಿ ತಿದ್ದುಪಡಿಗೆ ಅನುಮತಿಸಬೇಕೆಂದು ಕೋರಿರುತ್ತಾರೆ.

**8**. ಅರ್ಜಿದಾರರ/ವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಹೊಸದುರ್ಗ ತಾಲ್ಲೂಕು, ಶ್ರೀರಾಂಪುರ ಹೋಬಳಿ, ಎಸ್. ನೇರಳಕೆರೆ ಗ್ರಾಮದ ಶ್ರೀಮತಿ ಲಕ್ಷ್ಮಮ್ಮ ತಂದೆ ಕಟ್ಟಪ್ಪ ಇವಳು ದಿನಾಂಕಃ 19-01-2016 ರಂದು 2 ಮತ್ತು 3 ನೇ

ಪ್ರತಿವಾದಿಯರ ಪರವಾಗಿ ದಾವಾ ತಪಶೀಲಿನ 6 ರಿಂದ 10 ನೇ ಆಸ್ತಿಗಳಿಗೆ ಸಂಬಂಧಿಸಿದಂತೆ ಮೃತ್ಯುಪತ್ರವನ್ನು ಬರೆದಿರುವುದಾಗಿ ವಾದಿಗಳಿಗೆ ಇತ್ತೀಚೆಗೆ ತಿಳಿದುಬಂದಿದ್ದು ಮತ್ತು ಸದರಿ ಲಕ್ಷ್ಮಮ್ಮಳ ತಾಯಿ ಕರಿಯವ್ವ ದಿನಾಂಕಃ 17-05-1957 ರಂದು ನೊಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುತ್ತಾಳೆ ಎನ್ನುವುದು ಪ್ರತಿವಾದಿಗಳ ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದ ನಂತರ ಇತ್ತೀಚೆಗೆ ವಾದಿಗಳಿಗೆ ಗೊತ್ತಾಗಿರುತ್ತದೆ. ಆದ್ದರಿಂದ, ಸದರಿ ಸಂಗತಿಗಳ ಮೇಲೆ ವಾದಪತ್ರವನ್ನು ತಿದ್ದುಪಡೆ ಮಾಡುವುದು ಅವಶ್ಯವಾಗಿರುತ್ತದೆ. ಅಲ್ಲದೆ, ಉದ್ದೇಶಿತ ತಿದ್ದುಪಡೆಗೆ ದಾವಾ ಕಾರಣ ಮತ್ತು ದಾವೆಯ ಸ್ವರೂಪ ಬದಲಾವಣೆಗೊಳ್ಳುವುದಿಲ್ಲ. ಅಲ್ಲದೆ, ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ವಾದಿಗಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**9.** 1 ರಿಂದ 3 ನೇ ಎದುರುದಾರರ / 1 ರಿಂದ 3 ನೇ ಪ್ರತಿವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ, ಸುಳ್ಳು ಅಂಶವನ್ನು ಹೇಳಿದ್ದು, ಕೇವಲ ಕಾಲಪರಿಮಿತಿ ಮೀರಿದಂತಹ ದಾವೆಯನ್ನು ಕಾಲಪರಿಮಿತಿಯ ಒಳಗೆ ತರುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅಲ್ಲದೆ, ದಾನಪತ್ರದ ಬಗ್ಗೆ ದಶಕಗಳ ಹಿಂದೆಯೇ ವಾದಿಗಳಿಗೆ ಗೊತ್ತು ಮತ್ತು ಅದೇ ರೀತಿ ಮೃತ್ಯುಪತ್ರದ ಬಗ್ಗೆ ಸಂಪೂರ್ಣ ಮಾಹಿತಿಯು ವಾದಿಗಳಿಗೆ ಇದ್ದು, ಕೇವಲ ಪ್ರತಿವಾದಿಗಳಿಗೆ ತೊಂದರೆಯನ್ನು ಕೊಡುವ ಸಲುವಾಗಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅಲ್ಲದೆ, ಕಾಲಪರಿಮಿತಿ ಮೀರಿದಂತಹ ದಾವಾ ಕಾರಣ ಅಥವಾ ಹೊಸ ಪರಿಹಾರವನ್ನು ತಿದ್ದುಪಡೆಯ ಮೂಲಕ ಸೇರಿಸಲು

ಬರುವುದಿಲ್ಲ. ಆದರೂ ಸಹ, ದಾವೆಯ ಪ್ರಕ್ರಿಯೆಯನ್ನು ಮುಂದೂಡುವ ಸಲುವಾಗಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವುದರಿಂದ, ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10**. ವಾದಿಗಳು ತಮ್ಮ ವಾದಪತ್ರದಲ್ಲಿ, ದಾವಾ ಆಸ್ತಿಗಳು ತಮ್ಮ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳು ಲಕ್ಷ್ಮಮ್ಮ ಇವಳ ಹೆಸರಿನಲ್ಲಿ ಇದ್ದು, ಆದರೆ ಸದರಿ ಲಕ್ಷ್ಮಮ್ಮ ಅಥವಾ ಪ್ರತಿವಾದಿಗಳಿಗೆ ದಾವಾ ಆಸ್ತಿಗಳ ಮೇಲೆ ಸಂಪೂರ್ಣ ಮತ್ತು ಸ್ವಂತ್ರವಾದ ಹಕ್ಕು ಇರುವುದಿಲ್ಲ. ಅಲ್ಲದೆ, ಮೋಸದಿಂದ ದಿನಾಂಕಃ 18-01-2016 ರಂದು ನೊಂದಾಯಿತ ಮೃತ್ಯುಪತ್ರದ ಮೂಲಕ ದಾವಾ ತಪಶೀಲಿನ 1 ರಿಂದ 5 ನೇ ಆಸ್ತಿಗಳನ್ನು ಲಕ್ಷ್ಮಮ್ಮ ಇವಳಿಂದ 2 ಮತ್ತು 3 ನೇ ಪ್ರತಿವಾದಿಗಳು ಪಡೆದುಕೊಂಡಿದ್ದು, ಸದರಿ ಲಕ್ಷ್ಮಮ್ಮ ಇವಳಿಗೆ ಸಂಪೂರ್ಣವಾದ ಹಕ್ಕು ಇರಲಿಲ್ಲವೆಂದು ಆರೋಪಿಸಿದ್ದು, ಆದರೆ 2 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ತಪಶೀಲಿನ ಆಸ್ತಿಗಳು ಮೂಲತಃ ಲಕ್ಷ್ಮಮ್ಮ ಇವಳ ತಾಯಿಯಾದ ಕರಿಯವ್ವ ಗಂಡ ಕಟ್ಟಪ್ಪ ಇವಳಿಗೆ ಸಂಬಂಧಪಟ್ಟಿದ್ದು, ಅವಳು ದಿನಾಂಕಃ17-05-1957 ರಲ್ಲಿ ನೊಂದಾಯಿತ ದಾನಪತ್ರದ ಮೂಲಕ ದಾವಾ ಆಸ್ತಿಗಳನ್ನು ಲಕ್ಷ್ಮಮ್ಮ ಇವಳಿಗೆ ಬರೆದುಕೊಟ್ಟಿದ್ದು, ಸದರಿ ಲಕ್ಷ್ಮಮ್ಮ ದಾವಾ ಆಸ್ತಿಗಳನ್ನು ತನ್ನ ಜೀವಿತಾವಧಿಯಲ್ಲಿ ಅನುಭವಿಸಿ, ದಿನಾಂಕಃ 18 ಮತ್ತು 19 ಜನವರಿ 2016 ರಂದು ನೊಂದಾಯಿತ ದಾನಪತ್ರವನ್ನು 2 ಮತ್ತು 3 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟಿರುತ್ತಾಳೆ. ಆದ್ದರಿಂದ, 2 ಮತ್ತು 3 ನೇ ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ಮಾಲಕರು ಮತ್ತು ಸ್ವಾಧೀನದಾರರು ಎಂದು ತಮ್ಮ ಪ್ರತಿರಕ್ಷೆಯನ್ನು ತೆಗೆದುಕೊಂಡ ಕಾರಣ, ವಾದಿಗಳ ಮತ್ತು ಪ್ರತಿವಾದಿಗಳ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಪ್ರಶ್ನೆಗಳೆಂದರೆ, ದಾವಾ

ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆಯೋ ಅಥವಾ ಇಲ್ಲ ಮತ್ತು ಸದರಿ ಲಕ್ಷ್ಮಮ್ಮ ಇವಳಿಗೆ ದಾವಾ ತಪಶೀಲಿನ 1 ರಿಂದ 5 ನೇ ಆಸ್ತಿಗಳನ್ನು ಮೃತ್ಯು ಪತ್ರದ ಮೂಲಕ ಬರೆದುಕೊಡುವ ಸಂಪೂರ್ಣ ಹಕ್ಕು ಇತ್ತು ಅಥವಾ ಇಲ್ಲ. ಅಲ್ಲದೆ, ದಾವಾ ಆಸ್ತಿಗಳೆಲ್ಲವೂ ಮೂಲತಃ ಕರಿಯವ್ವ ಗಂಡ ಕಟ್ಟೆಪ್ಪ ಇವಳಿಗೆ ಸಂಬಂಧಪಟ್ಟ ಆಸ್ತಿಗಳಾಗಿದ್ದು, ಅವಳು ದಿನಾಂಕಃ 17-05-1957 ರಂದು ಲಕ್ಷ್ಮಮ್ಮ ಇವಳಿಗೆ ನೊಂದಾಯಿತ ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾಳೊ ಅಥವಾ ಇಲ್ಲ ಎನ್ನುವ ಅಂಶಗಳು ಉಭಯಪಕ್ಷಗಾರರ ಮಧ್ಯೆ ವಿವಾದದಲ್ಲಿ ಇರುವ ಕಾರಣ, ಉಭಯ ಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಈ ನ್ಯಾಯಾಲಯ ಪರಿಣಾಮಕಾರಿಯಾಗಿ ಹಾಗೂ ಅಂತಿಮವಾಗಿ ನ್ಯಾಯ ನಿರ್ಣಯಿಸುವ ಸಲುವಾಗಿ ವಾದಿಗಳ ವಾದಪತ್ರದ ಖಂಡಿಕೆ 4 ರಿಂದ 6 ರಲ್ಲಿ ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದು ಅವಶ್ಯವಾಗಿರುತ್ತದೆ. ಅಲ್ಲದೆ, ಉದ್ದೇಶಿದ ತಿದ್ದುಪಡಿಯಿಂದ ದಾವೆಯ ಸ್ವರೂಪ ಮತ್ತು ದಾವಾ ಕಾರಣ ಬದಲಾವಣೆಗೊಳ್ಳುವುದಿಲ್ಲ.ಅಲ್ಲದೇ, ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದರಿಂದ 1 ರಿಂದ 3 ನೇ ಪ್ರತಿವಾದಿಗಳಿಗೆ ಯಾವುದೇ ರೀತಿ ನಷ್ಟ ಮತ್ತು ಅನ್ಯಾಯ ಉಂಟಾಗುವುದಿಲ್ಲ. ಆದ್ದರಿಂದ, ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದು ಕಾನೂನು ಮತ್ತು ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ.

**11**. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ನ್ಯಾಯಾಲಯವು ಉಭಯ ಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ಅವಶ್ಯಕವಾದಂತಹ ತಿದ್ದುಪಡೆಯ ಸಲುವಾಗಿ ವಾದಪತ್ರ ಅಥವಾ ಲಿಖಿತ ಹೇಳಿಕೆಯ ತಿದ್ದುಪಡೆಗೆ ಅನುಮತಿಸಬಹುದಾಗಿರುತ್ತದೆ.

ಅಲ್ಲದೆ, ವಾದಿಗಳು ಈ ಉದ್ದೇಶಿತ ತಿದ್ದುಪಡೆಯ ಮೂಲಕ ತಮ್ಮ ವಾದಪತ್ರವನ್ನು ತಿದ್ದುಪಡೆ ಮಾಡಿಕೊಂಡ ನಂತರ, ಪ್ರತಿವಾದಿಗಳು ಸದರಿ ಸಂಗತಿಯನ್ನು ಅಲ್ಲಗಳೆಯಲು ಅಥವಾ ನಿರಾಕರಿಸಲು ತಮ್ಮ ಪರ ಹೆಚ್ಚುವರಿ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಎಲ್ಲಾ ಹಕ್ಕನ್ನು ಹೊಂದಿರುತ್ತಾರೆ. ಆದ್ದರಿಂದ, 1 ರಿಂದ 3 ನೇ ಪ್ರತಿವಾದಿಗಳ ಪರ ವಕೀಲರು ತಮ್ಮ ವಾದಮಂಡನೆಯಲ್ಲಿ ಹೇಳಿದಂತೆ, ಕಾಲಪರಿಮಿತಿ ಮೀರಿದ ದಾವಾ ಕಾರಣವನ್ನು ಅಥವಾ ಹೊಸ ಪರಿಹಾರವನ್ನು ತಿದ್ದುಪಡೆಯ ಮೂಲಕ ಸೇರಿಸಿ, ಕಾಲಪರಿಮಿತಿಯ ಒಳಗೆ ತಂದರೆ ಅದಕ್ಕೆ ವಿರುದ್ಧವಾಗಿ ಹೆಚ್ಚುವರಿ ಲಿಖಿತ ಹೇಳಿಕೆಯನ್ನು ಸಲ್ಲಿಸುವುದರ ಮೂಲಕ ವಾದಿಗಳ ದಾವೆ ಕಾಲಪರಿಮಿತಿಯ ಒಳಗೆ ಇಲ್ಲವೆಂದು ಹೇಳುವಂತಹ ಎಲ್ಲಾ ಹಕ್ಕನ್ನು ಪ್ರತಿವಾದಿಗಳು ಹೊಂದಿರುವ ಕಾರಣ ಹಾಗೂ ಉದ್ದೇಶಿತ ತಿದ್ದುಪಡೆಯು ಉಭಯ ಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಮತ್ತು ಅಂತಿಮವಾಗಿ ಇತ್ಯರ್ಥಪಡಿಸಲು ಅವಶ್ಯಕವಾಗಿರುವ ಕಾರಣ, ಉದ್ದೇಶಿತ ತಿದ್ದುಪಡೆಗೆ ಅನುಮತಿಸುವುದು ಕಾನೂನು ಹಾಗೂ ನ್ಯಾಯಾದ ಹಿತದೃಷ್ಟಿಯಿಂದ ಅವಶ್ಯವಾಗಿರುವುದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ಅರ್ಜಿದಾರರು/ವಾದಿಗಳು ತೋರಿಸಿರುತ್ತಾರೆ. ಕಾರಣ **ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**12.** **<u>ಅಂಶ-2</u>** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡಿದಃ

**ಆದೇಶ**

ಅರ್ಜಿದಾರರು/ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ, ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ - 04 ನ್ನು 500/- ರೂಗಳ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ವಾದಿಗಳು ತಮ್ಮ ವಾದ ಪತ್ರವನ್ನು ಮುಂದಿನ ಸುನಾವಣೆಯ ದಿನಾಂಕದಂದು ಅಥವಾ ಅದರೊಳಗೆ ತಿದ್ದುಪಡಿ ಮಾಡಬೇಕೆಂದು ನಿರ್ದೇಶಿಸಿ, ಆದೇಶಿಸಿದೆ.

ಖರ್ಚಿನ ಮೊತ್ತ 500/-ಗಳನ್ನು ವಾದಿಗಳು ಪ್ರತಿವಾದಿಗಳಿಗೆ ಕೊಡತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು ದಿನಾಂಕ **6 ನೇ ಫೆಬ್ರುವರಿ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**